# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ.04/2024**

**ದೋ.ಸಾ. : 09 ಪ್ರಾ.ಸಾ. : 02**

| | | |
|---|---|---|
| ಸಾಕ್ಷಿಯ ಹೆಸರು | : | ಕೃಷ್ಣಕುಮಾರ ಗೋವಿಂದ |
| ತಂದೆಯ ಹೆಸರು | : | ಕೆ ಗೋವಿಂದ |
| ವಯಸ್ಸು | : | 30 ವರ್ಷ |
| ಕೆಲಸ | : | ಹೋಟೇಲ್ ನಲ್ಲಿ ಕೆಲಸ |
| ವಾಸ | : | ಉಲ್ಲಾಳ,ಮಂಗಳೂರು |

**ದಿನಾಂಕಃ 14-03-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ಮೃತೆ ನಂದಿನಿ ನನ್ನ ಅಕ್ಕ. ನನ್ನ ತಂದೆ-ತಾಯಿಗೆ ನಾನು ಹಾಗೂ ನನ್ನ ಅಕ್ಕ ಮೃತೆ ನಂದಿನಿ ಇಬ್ಬರು ಮಕ್ಕಳು. ಈಗ ನ್ಯಾಯಾಲಯದ ವಿಸಿಯಲ್ಲಿ ಕಾಣುತ್ತಿರುವ ಆರೋಪಿ ನನ್ನ ಬಾವ. ನನ್ನ ಅಕ್ಕ -ಬಾವನಿಗೆ ಸಾನಿತ್ಯ ಮತ್ತು ಋತ್ವಿಕ ಎನ್ನುವ ಇಬ್ಬರು ಮಕ್ಕಳಿರುತ್ತಾರೆ. ನನ್ನ ಅಕ್ಕನ ಮದುವೆಯಾಗಿ ಸುಮಾರು 14 ವರ್ಷಗಳಾಗಿವೆ. ನನ್ನ ಬಾವನ ಮೂಲ ಮನೆ ಮುರ್ಡೆಶ್ವರದಲ್ಲಿದ್ದು, ಅವರು ಮುರ್ಡೆಶ್ವರದಿಂದ ಸ್ವಲ್ಪ ದೂರದಲ್ಲಿ ಬಾಡಿಗೆಗೆ ವಾಸವಾಗಿದ್ದರು. ನನ್ನ ಅಕ್ಕ ಹಾಗೂ ಬಾವನ ಜೀವನ ಚೆನ್ನಾಗಿ ಇತ್ತು. ನನ್ನ ಅಕ್ಕ ಮನೆಯಲ್ಲಿರುತ್ತಿದ್ದಳು ಹಾಗೂ ನನ್ನ ಬಾವ ಶಿಲ್ಪಿ ಕೆಲಸವನ್ನು ಮಾಡುತ್ತಿದ್ದರು.

2. ದಿಃ 17-10-2023 ರಂದು ರಾತ್ರಿ 09-30 ರಿಂದ 10-00 ಗಂಟೆ ಸಮಯದಲ್ಲಿ ನಾನು ಮಂಗಳೂರಿನಲ್ಲಿದ್ದಾಗ ಪೊಲೀಸ್ ಠಾಣೆಯಿಂದ ಕರೆ ಮಾಡಿ, ನನ್ನ ಅಕ್ಕ ತೀರಿಕೊಂಡಿರುತ್ತಾರೆ, ಭಟ್ಕಳದ ಸರಕಾರಿ ಆಸ್ಪತ್ರೆಗೆ ಬನ್ನಿ ಎಂದು ತಿಳಿಸಿರುತ್ತಾರೆ. ಅದರಂತೆ ನಾನು ಮರುದಿನ ಬೆಳಿಗ್ಗೆ ಮಂಗಳೂರಿನಿಂದ ಭಟ್ಕಳಕ್ಕೆ ಬಂದು, ಭಟ್ಕಳದ ಸರಕಾರಿ ಆಸ್ಪತ್ರೆಯ ಶವಗಾರದಲ್ಲಿ ನನ್ನ ಅಕ್ಕನ ಶವವನ್ನು ನೋಡಿ ಗುರುತಿಸಿರುತ್ತೇನೆ. ನಾನು ಶವಗಾರದಲ್ಲಿ ನನ್ನ ಅಕ್ಕನ ಶವವನ್ನು ನೋಡಿದಾಗ ಆಕೆಯ ಮುಖವನ್ನು ಮಾತ್ರ ನೋಡಿರುತ್ತೇನೆ, ಆದರೆ ಆಕೆಯ ಮೈ ಮೇಲೆ ಏನಾಗಿರುತ್ತದೆ ಎಂದು ನಾನು ನೋಡಿರುವುದಿಲ್ಲ. ನಿಪಿ-2 ಫೋಟೋದಲ್ಲಿ

ಸಾಕ್ಷಿಯ ತನ್ನ ಅಕ್ಕನ ಶವವನ್ನು ನೋಡಿ ಗುರುತಿಸಿರುತ್ತಾರೆ. ಮರಣೋತ್ತರ ಪರೀಕ್ಷೆಯ ನಂತರ ಆಸ್ಪತ್ರೆಯ ವೈದ್ಯರು ನನ್ನ ಅಕ್ಕನ ಶವವನ್ನು ನಮಗೆ ಹಸ್ತಾಂತರಿಸಿರುತ್ತಾರೆ. ಶವವನ್ನು ಹಸ್ತಾಂತರಿಸಿದ ಬಗ್ಗೆ ರಶೀದಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ–4 ಎಂದು, ಸಾಕ್ಷಿಯ ಸಹಿಯನ್ನು ನಿಪಿ–4(ಎ) ಎಂದು ಗುರುತಿಸಲಾಯಿತು. ಈ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ. ನನ್ನ ಅಕ್ಕ ಹೇಗೆ ಮೃತಪಟ್ಟಿರುತ್ತಾಳೆ ಎಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಮಾನ್ಯ ಅಭಿಯೋಜಕರು ಅನುಮತಿಯನ್ನು ಕೇಳುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಗಮನಿಸಿ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಸರಕಾರಿ ಅಭಿಯೋಜಕರಿಂದಃ**

3. ಆರೋಪಿಯಾದ ನನ್ನ ಬಾವ ಮದುವೆಯಾದ ಹೊಸದರಲ್ಲಿ ನನ್ನ ಅಕ್ಕನನ್ನು ಚೆನ್ನಾಗಿ ನೋಡಿಕೊಂಡಿರುತ್ತಾನೆ ಎಂದರೆ ಸರಿ. ಸ್ವಲ್ಪ ದಿನಗಳ ನಂತರ ಆರೋಪಿ ನನ್ನ ಅಕ್ಕನ ಜೊತೆ ಜಗಳ ಮಾಡುತ್ತಿದ್ದು, ಈ ವಿಷಯನ್ನು ನಮ್ಮ ಬಳಿ ಫೋನ್ ಮಾಡಿ ಹೇಳಿದ್ದಳು ಎಂದರೆ ಸರಿಯಲ್ಲ. ಈ ಘಟನೆ ನಡೆಯುವ 4 ತಿಂಗಳ ಮೊದಲು, ನನ್ನ ಅಕ್ಕ ನಾನು ಮಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದಲ್ಲಿಗೆ ಬಂದು, ನನ್ನನ್ನು ಭೇಟಿ ಮಾಡಿ, ಆರೋಪಿಯಾದ ನನ್ನ ಬಾವನು ನನ್ನ ಅಕ್ಕನ ಜೊತೆ ಯಾವಾಗಲೂ ಗಲಾಟೆ ಮಾಡುತ್ತಿರುತ್ತಾನೆ ಎಂದು ಹೇಳಿರುತ್ತಾಳೆ ಎಂದರೆ ಸರಿಯಲ್ಲ. ಸಾಕ್ಷಿಯು ತನ್ನ ಅಕ್ಕ ಹುಷಾರಿಲ್ಲದ ಕಾರಣ ಮಂಗಳೂರಿಗೆ ಬಂದಿದ್ದಳು ಎಂದು ನುಡಿಯುತ್ತಾರೆ. ನಂತರ ನಾನು ನನ್ನ ಅಕ್ಕನನ್ನು ಮಂಗಳೂರಿನಿಂದ ಮುರ್ಡೇಶ್ವರಕ್ಕೆ ಕರೆದುಕೊಂಡು ಬಂದು, ಬಿಟ್ಟು ವಾಪಸ್ ಮಂಗಳೂರಿಗೆ ಹೋಗಿರುತ್ತೇನೆ ಎಂದರೆ ಸರಿ.

4. ದಿಃ 17–10–2023 ರಂದು ರಾತ್ರಿ 09–30 ಗಂಟೆಗೆ ಮುರ್ಡೇಶ್ವರ ಪೊಲೀಸರು ನನಗೆ ಕರೆ ಮಾಡಿ, ಈ ದಿನ ಸಂಜೆ 07–15 ಗಂಟೆ ಸಮಯದಲ್ಲಿ ಆರೋಪಿಯು ನಿನ್ನ ಅಕ್ಕಳಾದ ನಂದಿನಿಯೊಂದಿಗೆ ಜಗಳವಾಡಿ, ಕತ್ತಿಯಿಂದ ಅವಳ ಗದ್ದದ ಕೆಳಗೆ ಕಡಿದು, ಗಾಯಗೊಳಿಸಿ, ಕೊಲೆ ಮಾಡಿರುತ್ತಾನೆ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ನಂತರ ನಾನು ಮರುದಿನ ಭಟ್ಕಳ ಪೊಲೀಸ್ ಠಾಣೆಗೆ ಬಂದಿದ್ದು, ಪೊಲೀಸರು ನನ್ನನ್ನು ಭಟ್ಕಳದ ಸರಕಾರಿ ಆಸ್ಪತ್ರೆಯ ಶವಗಾರಕ್ಕೆ ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸರಿ. ನನ್ನ ಅಕ್ಕನ ಶವವನ್ನು ನೋಡಿದಾಗ, ಆಕೆಯ ಬಲಭಾಗದ ಹಣೆಯ ಮೇಲೆ 1 ಇಂಚು ಉದ್ದದ ಒಂದು

ಗಾಯ, ಗದ್ದದ ಕೆಳಗೆ 2 ½ ಇಂಚು ಉದ್ದದ ಒಂದು ಗಾಯ, ಅದರ ಕೆಳಗೆ 1 ½ ಇಂಚು ಉದ್ದ ಹಾಗೂ ½ ಇಂಚು ಅಗಲ, 1.2 ಸೆಂ.ಮೀ ಆಳದ ಒಂದು ಗಾಯಗಳಾಗಿದ್ದವು ಎಂದರೆ ಸಾಕ್ಷಿಯು ನಾನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ಅದೇ ರೀತಿ ನನ್ನ ಅಕ್ಕನ ಕುತ್ತಿಗೆಯಲ್ಲಿ 1 ½ ಇಂಚು ಉದ್ದ ಹಾಗೂ ½ ಇಂಚು ಅಗಲ, 1.5 ಸೆಂ.ಮೀ ಆಳದ ಒಂದು ಗಾಯವಾಗಿತ್ತು ಎಂದರೆ ಸರಿಯಲ್ಲ. ಅದೇ ರೀತಿ ನನ್ನ ಅಕ್ಕನ ಎದೆಯ ಭಾಗದಲ್ಲಿ 1 ½ ಇಂಚು ಉದ್ದ ಹಾಗೂ ½ ಇಂಚು ಅಗಲದ ಕತ್ತರಿಸಿದ ಗಾಯ ಹಾಗೂ ಎದೆಯ ಕೆಳ ಭಾಗ ಹಾಗೂ ಹೊಟ್ಟೆಯ ಮೇಲೆ 6 ಸೆಂ.ಮೀ ಉದ್ದ ಹಾಗೂ 3 ಸೆಂ.ಮೀ ಅಗಲದ ಗಾಯ, ಅದರ ಕೆಳಗೆ 3.5 ಸೆಂ.ಮೀ ಉದ್ದದ ಕತ್ತರಿಸಿದ ಗಾಯ, ಅದರ ಕೆಳಗೆ 3.5 ಸೆಂ.ಮೀ ಉದ್ದದ ಕತ್ತರಿಸಿದ ಗಾಯ ಈ ಗಾಯಗಳ ಪಕ್ಕದಲ್ಲಿ ಎರಡು ವೃತ್ತಾಕಾರದ ಗಾಯಗಳಾಗಿದ್ದವು ಮತ್ತು ಸೊಂಟದ ಎಡಭಾಗದಲ್ಲಿ 2 ಸೆಂ.ಮೀ ಉದ್ದ, 1 ಸೆಂ.ಮೀ ಅಗಲದ ಕತ್ತರಿಸಿದ ಗಾಯವಾಗಿತ್ತು ಹಾಗೂ ಸದರಿ ಗಾಯಗಳು ಕತ್ತಿಯಿಂದ ಹೊಡೆದಾಗ ಆಗುವಂತಹ ಗಾಯಗಳಾಗಿರುತ್ತವೆ ಎಂದರೆ ಸಾಕ್ಷಿಯು ನಾನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ ಸಾಕ್ಷಿಯು ಮುಂದುವರೆದು ಅಕ್ಕನ ಶವವನ್ನು ನೋಡಿದ ನನಗೆ ಆತಂಕವಾಗಿರುತ್ತದೆ.

5. ನನ್ನ ಅಕ್ಕ ಮಂಗಳೂರಿಗೆ ಬಂದು, ತನ್ನ ಗಂಡ ಹೊಡೆಯುತ್ತಿದ್ದ ಬಗ್ಗೆ ನನ್ನ ಬಳಿ ಹೇಳಿದ ಬಗ್ಗೆ ಹಾಗೂ ನನ್ನ ಅಕ್ಕ ಮೃತಪಟ್ಟ ಬಗ್ಗೆ ಪೊಲೀಸರು ನನಗೆ ತಿಳಿಸಿದ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕಯನ್ನು ನಿಪಿ–5 ಎಂದು ಗುರುತಿಸಲಾಯಿತು. ಆರೋಪಿಯೇ ನನ್ನ ಅಕ್ಕನನ್ನು ಕೊಲೆ ಮಾಡಿದ್ದರೂ ಸಹ ಆತ ನನ್ನ ಬಾವನಾದ ಕಾರಣ, ಆತನಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಆರ್.ಕೆ.ಎಂ ವಕೀಲರಿಂದ**

6. ಮೃತೆ ನಂದಿನಿ ನನ್ನ ಅಕ್ಕಳಾದ ಕಾರಣ ಆಕೆಯ ಮೇಲೆ ನಮಗೆ ಪ್ರೀತಿ ಹಾಗೂ ಕಾಳಜಿ ಇರುತ್ತದೆ ಎಂದರೆ ಸರಿ. ನನ್ನ ಅಕ್ಕ ಮದುವೆಯಾದ ಸುಮಾರು 14 ವರ್ಷಗಳ ಕಾಲ ಆರೋಪಿಯೊಂದಿಗೆ ಜೀವನ ಮಾಡಿರುತ್ತಾಳೆ. ಆಕೆಯ ಮದುವೆಯಾದ ನಂತರ ನಾನೂ ಸಹ ಆಕೆಯ ಮನೆಗೆ ಹೋಗಿ ಬಂದು ಮಾಡುತ್ತಿದ್ದೆ ಎಂದರೆ ಸರಿ. ಆರೋಪಿ ವೃತ್ತಿಯಲ್ಲಿ ಶಿಲ್ಪಿಯಾಗಿದ್ದು, ಆತ ಕಷ್ಟಪಟ್ಟು ದುಡಿದು ತನ್ನ ಹೆಂಡತಿ ಮಕ್ಕಳನ್ನು ಚೆನ್ನಾಗಿ

ನೋಡಿಕೊಳ್ಳುತಿದ್ದನು ಎಂದರೆ ಸರಿ. ಆಕೆ ಮದುವೆಯಾದ ನಂತರದಿಂದ ಈ ಘಟನೆ ನಡೆಯುವವರೆಗೆ ನನ್ನ ಅಕ್ಕ ಆರೋಪಿಯ ವಿರುದ್ಧ ಯಾವುದೇ ದೂರನ್ನು ನೀಡಿರುವುದಿಲ್ಲ ಎಂದರೆ ಸರಿ. ನಾನು ಮಂಗಳೂರಿನಿಂದ ಹೊರಟು ಭಟ್ಕಳಕ್ಕೆ ಸೇರಲು 5–6 ತಾಸುಗಳ ಪ್ರಯಾಣವಾಗಿರುತ್ತದೆ. ನನ್ನ ಅಕ್ಕ ಮೃತಪಟ್ಟ ಸುದ್ದಿ ಕೇಳಿ ನನಗೆ ದುಃಖವಾಗಿರುತ್ತದೆ ಹಾಗೂ ಅದೇ ದುಃಖದಿಂದ ನಾನು ಮಂಗಳೂರಿನಿಂದ ಮುರ್ಡೇಶ್ವರಕ್ಕೆ ಪ್ರಯಾಣ ಮಾಡಿರುತ್ತೇನೆ. ಆ ಸಮಯದಲ್ಲಿ ನಾನು ನನ್ನ ಅಕ್ಕನ ಮೃತದೇಹವನ್ನು ನೋಡುವ ಮನಸ್ಥಿತಿಯಲ್ಲಿ ನಾನು ಇರಲಿಲ್ಲ. ಆಕೆ ಮೃತಪಟ್ಟ ಕಾರಣ ದುಃಖದಿಂದ ಆಕೆಯ ಶವವನ್ನು ನಾನು ಸೂಕ್ಷ್ಮವಾಗಿ ಗಮನಿಸಿರುವುದಿಲ್ಲ ಹಾಗೂ ನಾನು ಯಾವುದೇ ಗಾಯಗಳನ್ನು ಸಹ ನೋಡಿರುವುದಿಲ್ಲ.

7. ನನ್ನ ಅಕ್ಕ ಮಂಗಳೂರಿಗೆ ಬಂದಾಗ, ಆರೋಗ್ಯ ಸರಿಯಿಲ್ಲದೇ ಬಂದಿದ್ದು, ಅದು ಸಹಜವಾಗಿರುತ್ತದೆ ಎಂದರೆ ಸರಿ. ಆ ಸಮಯದಲ್ಲಿ ತನ್ನ ಗಂಡನ ಬಗ್ಗೆ ಯಾವುದೇ ದೂರನ್ನು ಹೇಳಿರುವುದಿಲ್ಲ. ಅದೇ ರೀತಿ ನಾನು ನನ್ನ ಅಕ್ಕನನ್ನು ಮಂಗಳೂರಿನಿಂದ ಮುರ್ಡೇಶ್ವರಕ್ಕೆ ಸಹಜವಾಗಿ ಕರೆದುಕೊಂಡು ಬಂದು ಬಿಟ್ಟು ಹೋಗಿರುತ್ತೇನೆ. ನನ್ನ ಹೇಳಿಕೆಯಲ್ಲಿ ನಾನು ನನ್ನ ಬಾವನಾದ ಆರೋಪಿಯ ಬಗ್ಗೆ ಯಾವುದೇ ದೂರನ್ನು ಹೇಳಿರುವುದಿಲ್ಲ. ಆರೋಪಿಯಾದ ನನ್ನ ಬಾವನಿಗೆ ಸಹಾಯವಾಗಲೆಂದು ಸುಳ್ಳು ಸಾಕ್ಷ್ಯ ನುಡಿಯುವ ಅಗತ್ಯ ಇಲ್ಲ ಎಂದರೆ ಸರಿ. ಪೊಲೀಸರು ನನ್ನಿಂದ ಯಾವುದೇ ಸಹಿಗಳನ್ನು ಪಡೆದುಕೊಂಡಿರುವುದಿಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/-

(ಮಾಯಣ್ಣ ಬಿ.ಎಲ್.)

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಉತ್ತರಕನ್ನಡ, ಕಾರವಾರ